ಇ) ಹಾಗಿದ್ದಲ್ಲಿ ಇನ್ನೂ ಸರಿಯಾದ ಜಾಗದಲ್ಲಿ ಮನೆ ನಿರ್ಮಿಸಲು ಬಡವರಿಗೆ ಹಾಗೂ ದಲಿತರಿಗೆ ಹಂಚಿಕೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ.

ಈ) ಸಿರ್ಸಿ ನಿಹರು ನಗರದಲ್ಲಿ ಹಾಗೂ ಯಲ್ಲಾಪುರದಲ್ಲಿನ ಸರ್ವೆ ನಂ. ೪೧.೧.೨.೧.೨.೧.೨.೨ ಮತ್ತು ಸ.ನಂ. ೧೧೩೨ ಯಲ್ಲಿ ಬಡವರಿಗೆ ಜಮೀನುಗಳನ್ನು ನಿವೇಶನಗಳಿಗಾಗಿ ಹಂಚಿಕೆ ಮಾಡಲು ಮಂಜೂರಾಗಿದೆಯೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಇ) ಮತ್ತು ಈ) ಸದನದ ಮುಂದಿರುವ ತಿದ್ದುಪಡಿಯ ಚೌಕಟ್ಟಿನಲ್ಲಿ ಅತಿಕ್ರಮಣದಾರರ ಅರ್ಹತೆಯನ್ನು ಪೊಂದಿದ್ದ ಪಕ್ಷದಲ್ಲಿ ತಿದ್ದುಪಡಿ ಕಾಯ್ದೆ ಪಾಸಾದ ನಂತರ ಸಕ್ರಮಗೊಳಿಸಲು ಮತ್ತು ಮಂಜೂರಾತಿಗೆ ಕ್ರಮ ಜರುಗಿಸಲಾಗುವುದು.

ಕಂದಾಯ ವಸೂಲಾತಿ ಮಾಡುವಾಗ ರೈತರ ಆಸ್ತಿ–ಪಾಸ್ತಿಗಳನ್ನು ಜಪ್ತಿ ಮಾಡುತ್ತಿರುವುದು

೨೦೬೪. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರಾದ್),—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಂದಾಯ ಬಾಕಿಯನ್ನು ಕಾನೂನು ಪ್ರಕಾರ ವೈಯಕ್ತಿಕವಾಗಿ ಸೂಚನೆ ಕೊಡದೆ ರೈತರ ಆಸ್ತಿಪಾಸ್ತಿಗಳನ್ನು ಜೀರಾದ್ ತಾಲ್ಲೂಕಿನ ಕೌಟಾ ಗ್ರಾಮದಲ್ಲಿ ಜಪ್ತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು).—

ಅ) ಇಲ್ಲ. ಬಾಕೀದಾರರನ್ನು ಕಂದಾಯ ಇಲಾಖೆಯ ಸಿಬ್ಬಂದಿ ಸ್ವಯಂ ಸಂದರ್ಶಿಸಿ ಕರ್ನಾಟಕ ಭೂ ಕಂದಾಯ ಕಾಯಿದೆಯಲ್ಲಿ ವಿವರಿಸಲಾದ ಎಲ್ಲಾ ಕ್ರಮಗಳನ್ನು ಪಾಲಿಸಿ ಹಣವನ್ನು ವಸೂಲಿ ಮಾಡಲಾಗಿದೆ.

ಆ) ಪ್ರಶ್ನೆ 'ಆ' ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಅಧ್ಯಕ್ಷರೇ, ನನ್ನದು ಒಂದು ಪ್ರಶ್ನೆ ಇದೆ.

ಶ್ರೀ ಯು. ಭೂಪತಿ.— ಅಧ್ಯಕ್ಷರೇ, ನನ್ನದೂ ಒಂದು ಪ್ರಶ್ನೆ ಇದೆ.

ಅಧ್ಯಕ್ಷರು.— ದಯವಿಟ್ಟು ತಾವಿಬ್ಬರೂ ತುಳಿತಂಕೊಳ್ಳಿ. ನಾನು ತಮ್ಮ ಹೆಸರನ್ನು ಕರೆದಾಗ ತಾವು ತಮ್ಮ ಸ್ಥಾನದಲ್ಲಿ ಇರಲಿಲ್ಲ. ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ನಾನು ಹೆಸರು ಕೂಗಿದಾಗ ತಾವು ಗೈರು ಹಾಜರಿದ್ದರೆ ಮತ್ತೆ ಅವನ್ನು ತೆಗೆದುಕೊಳ್ಳಲು ಬರುವುದಿಲ್ಲ. ಪ್ರಶ್ನೋತ್ತರ ವೇಳೆಯ ಕೊನೆಯಲ್ಲಿ ಇನ್ನೂ ವೇಳೆ ಇದ್ದರೆ, ಗೈರು ಹಾಜರು ಇದ್ದವರ ಹೆಸರನ್ನು ಮತ್ತೆ ಕರೆಯುವ ಪದ್ಧತಿ ಇದೆ. ಆದರೆ ಇಪತ್ತು ಪ್ರಶ್ನೋತ್ತರ ವೇಳೆ ಮುಗಿದಿದೆ. ಈಗ ವರದಿಯನ್ನು ಒಪ್ಪಿಸುವುದು.